ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**80 (79)**
ಸದಸ್ಯರ ಹೆಸರು	:	ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	**01-02-2021**
ಉತ್ತರಿಸುವ ಸಚಿವರು	:	**ಮಾನ್ಯ ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು**

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕಾರವಾರ ಜಿಲ್ಲೆಯ ಕೆನರಾ ವೃತ್ತದ ಹಳಿಯಾಳ ವಿಭಾಗದ ಭಾಗವತಿ ವಲಯದ ತಟ್ಟಿಗೇರಾ ಶಾಖೆಯ ವ್ಯಾಪ್ತಿಯಲ್ಲಿ ಸುಮಾರು 800 ಎಕರೆಯಷ್ಟು ಕಾಯ್ದಿಟ್ಟ ಅರಣ್ಯ ಪ್ರದೇಶವನ್ನು ಅತಿಕ್ರಮಣ ಮಾಡಿಕೊಳ್ಳಲಾಗಿದ್ದು, ಇದು ಅರಣ್ಯ ಅಧಿಕಾರಿಗಳ ಸಹಕಾರದಿಂದಲೇ ಪಡೆದಿದೆ ಎಂದು ಆರೋಪ ಕೇಳಿ ಬಂದು ಬಹಳಷ್ಟು ದಿನಗಳಾದರೂ ಇಲ್ಲಿಯವರೆಗೆ ಇಲಾಖೆ ಸಂಬಂಧಿಸಿದ ಅಧಿಕಾರಿಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	ಕೆನರಾ ವೃತ್ತದ ಹಳಿಯಾಳ ವಿಭಾಗದ ಭಾಗವತಿ ವಲಯದ ತಟ್ಟಿಗೇರಿ ಶಾಖಾ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶವು ತಟ್ಟಿಹಳ್ಳ ಜಲಾಶಯದ ಹಿನ್ನೀರಿನ ಪ್ರದೇಶವಾಗಿದ್ದು, ಒಟ್ಟು 4,269 ಎಕರೆ 36 ಗುಂಟೆ ಕಾಯ್ದಿಟ್ಟ ಅರಣ್ಯ ಪ್ರದೇಶವಾಗಿರುತ್ತದೆ. (G.O.No.FO5/11.03.1879) ಸದರಿ ಅರಣ್ಯ ಪ್ರದೇಶದಲ್ಲಿ 1300 ಎಕರೆ 12 ಗುಂಟೆ ಅರಣ್ಯ ಪ್ರದೇಶವನ್ನು ತಟ್ಟಿಹಳ್ಳ ಜಲಾಶಯ ನಿರ್ಮಿಸಲು KPCL ರವರಿಗೆ 1979-80ರ ದಶಕದಲ್ಲಿ ಕೊಡಲಾಗಿರುತ್ತದೆ. ಸದರಿ ಜಲಾಶಯವು ಮಳೆಗಾಲದಲ್ಲಿ ಪೂರ್ಣ ಪ್ರಮಾಣದಲ್ಲಿ ಭರ್ತಿಯಾದಾಗ Maximum Water Level (MWL)ನ ಮಿತಿ 469.05 MRL ಆಗಿರುತ್ತದೆ. ತಟ್ಟಿಹಳ್ಳ ಜಲಾಶಯದ ನಿರ್ಮಾಣ ಹಂತದಲ್ಲಿ ಗರಿಷ್ಠ ನೀರಿನ ಮಟ್ಟಕ್ಕೆ ಮುಳುಗಡೆಯಾಗುವ ಅರಣ್ಯ ಪ್ರದೇಶವನ್ನು ತೆರವುಗೊಳಿಸಿ ನೀಡಲಾಗಿರುತ್ತದೆ. ಸದರಿ ಜಲಾಶಯವು ಬಹಳಷ್ಟು ವರ್ಷ ಭರ್ತಿಯಾಗದ ವರ್ಷಗಳಲ್ಲಿ ಖಾಲಿ ಇರುವ ಹಿನ್ನೀರಿನ ಪ್ರದೇಶಗಳಲ್ಲಿ ರೈತರು ಹಿಂದಿನಿಂದ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ. ಗರಿಷ್ಠ ಜಲಾಶಯ ಮಟ್ಟದ ಕಾಂಟೂರ್ (ಆಕಾರ ರೇಖೆ) ಪ್ರಕಾರ KPCL ರವರಿಗೆ ಅರಣ್ಯ ಭೂಮಿಯನ್ನು ಗುತ್ತಿಗೆ ಆಧಾರದ ಮೇಲೆ ನೀಡಲಾಗಿರುತ್ತದೆ. ಸದರಿ ಕಾಂಟೂರ್ (ಆಕಾರ ರೇಖೆ) ಗುರುತನ್ನು ಬಹಳ ಹಿಂದೆ ಮಾಡಿದ್ದು, ಹಾಗೂ ಗಡಿಯ ಗುರುತು ಪ್ರವಾಹ ಮತ್ತು ನೈಸರ್ಗಿಕ ಕಾರಣಗಳಿಂದ ಇರುವುದಿಲ್ಲ. KPCL ರವರಿಗೆ ಹೊಸದಾಗಿ ಅರಣ್ಯ

		ಇಲಾಖೆಯೊಂದಿಗೆ ಜಂಟಿಯಾಗಿ ಸರ್ವೆ ಕೈಗೊಂಡು ಗಡಿಯನ್ನು ಗುರುತಿಸಲು ಸೂಚಿಸಲಾಗಿರುತ್ತದೆ. ಸದರಿ ಸರ್ವೆ ಕಾರ್ಯ ಪೂರ್ಣಗೊಂಡ ನಂತರ ನಿರ್ದಿಷ್ಟ ವಾಸ್ತವಾಂಶವು ಪತ್ತೆಯಾಗುತ್ತದೆ. ವಾಸ್ತವಾಂಶ ತಿಳಿದ ನಂತರ ಅರಣ್ಯ ಅತಿಕ್ರಮಣವಾಗಿದ್ದಲ್ಲಿ ಅರಣ್ಯ ಭೂಮಿಯನ್ನು ಹಿಂದಕ್ಕೆ ಪಡೆದು ತಪ್ಪಿತಸ್ಥರ ಮೇಲೆ ಕಾನೂನು ಕ್ರಮಕೈಗೊಳ್ಳಲಾಗುವುದು.
ಆ)	ಈ ರೀತಿ ಅತೀ ದೊಡ್ಡ ಪ್ರಮಾಣದಲ್ಲಿ ಅತಿಕ್ರಮಣ ಮಾಡಿರುವ ಬಗ್ಗೆ ಇಲ್ಲಿಯವರೆಗೆ ಇಲಾಖೆಯವರು ಯಾವ ರೀತಿ ತನಿಖೆ ಮಾಡಿರುತ್ತಾರೆ; ಯಾವ ಅಧಿಕಾರಿಗೆ ತನಿಖೆ ಮಾಡಲು ನೇಮಿಸಿರುತ್ತಾರೆ. ಯಾರ ಯಾರ ಮೇಲೆ ಕ್ರಮ ಕೈಗೊಳ್ಳಲಾಗಿದೆ? (ಸವಿಸ್ತಾರ ವರದಿ ನೀಡುವುದು)	ಅರಣ್ಯ ಅತಿಕ್ರಮಣದ ಬಗ್ಗೆ ತನಿಖೆ ಮಾಡಲು ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿದಳ, ಶಿರಸಿ ಇವರನ್ನು ನೇಮಿಸಲಾಗಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ.

ಸಂಖ್ಯೆ: ಅಪಜೀ 07 ಎಫ್‌ಜಿಎಲ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು